
SERVICE ABOVE SELF



Rotary

विश्वमित्रः

# ವಿಶ್ವಮಿತ್ರ

# VISHWAMITHRA

Weekly House Bulletin of Rotary Club Shimoga, R.I. Dist. 3182

THE MAGIC OF ROTARY 2024-25

Rtn. Stephanie A. Urchick
RI President 2024-25

Rtn. CA Dev Anand
District Governor 2024-25

Rtn. K. Sooryanarayana Udpa
President, Mob: 99009 66114

Rtn. N.G. Usha
Secretary, Mob : 81975 92278

Rtn. M. Madhavachar
Bulletin Editor, Mob: 98862 73495

We meet every Wednesday at 6.45p.m. at Rotary Youth Centre, Sowlanga Road, L.B.S.Nagar, Shivamogga- 577 204

ಸಂಪುಟ – 67 ಸಂಚಿಕೆ –08 ದಿನಾಂಕ : 28–08–2024

## ದಿನಾಂಕ: 28.08.2024 ರ ವಾರದ ಸಭೆಯ ವರದಿ

**2024–25 ನೇ ಸಾಲಿನ ಎರಡನೇ ಕೌಟುಂಬಿಕ ಸ್ನೇಹಮಿಲನ ಕಾರ್ಯಕ್ರಮ ಹಾಗೂ ಈ ಸಾಲಿನ 9ನೇ ವಾರದ ಸಭೆ.**

**ದಿನಾಂಕ: 28.08.2024 ರಂದು ರೋಟರಿಯ ಈ ಸಾಲಿನ ಎರಡನೇ ಕೌಟುಂಬಿಕ ಸ್ನೇಹಮಿಲನ ಕಾರ್ಯಕ್ರಮವನ್ನು ನಮ್ಮರೋಟರಿಯ ಸಭಾಂಗಣದಲ್ಲಿ ಸಂಜೆ 7.30 ಕ್ಕೆ ಏರ್ಪಡಿಸಲಾಗಿತ್ತು. ವೇದಿಕೆಯ ಮೇಲೆ ಅಧ್ಯಕ್ಷರಾದ ರೊ.ಕೆ.ಸೂರ್ಯನಾರಾಯಣ ಉಡುಪ, ಕಾರ್ಯದರ್ಶಿ ರೊ.ಎನ್.ಜಿ. ಉಷಾ ಮತ್ತು ಕಾರ್ಯಕ್ರಮ ಸಮಿತಿ ಚೇರ್ಮನ್ ರೊ.ಎನ್.ವಿ.ಭಟ್‌ರವರು ಉಪಸ್ಥಿತರಿದ್ದು, ಅಂದು ಆಯೋಜಿಸಿದ್ದ "ಮೇರಾ ಭಾರತ್ ಮಹಾನ್" ಎಂಬ ಕಾರ್ಯಕ್ರಮ ಅಚ್ಚುಕಟ್ಟಾಗಿ ನಡೆದು ಯಶಸ್ವಿಯಾಯಿತು.**




ಅಂದಿನ ಸಭೆ ಪ್ರಾರಂಭದಲ್ಲಿ "ದಿಕ್ಕಿ ದಿಕ್ಕಿನಲಿ ಹರಡಲಿ ಘೋಷಣೆ ನನ್ನದೇಶ ಮಹಾನ" ಎಂಬ ಗೀತೆಯನ್ನು ರೊ.ಭಾರ್ಗವಿ ಭಟ್‌ರವರು ಸುಶ್ರಾವ್ಯವಾಗಿ ಹಾಡುವುದರ ಮೂಲಕ ಪ್ರಾರ್ಥನೆ ಮಾಡಿದರು. ರೊ. ಸಿ.ಬಿ.ವೀರಣ್ಣನವರು ಕ್ಲಬ್‌ನ ಈ ಸಾಲಿನ 9 ನೇ ಸಭೆಗೆ ಹೃತ್ಪೂರ್ವಕವಾಗಿ ಸರ್ವರನ್ನು ಸ್ವಾಗತಿಸಿದರು. ಕಾರ್ಯದರ್ಶಿ ರೊ.ಎನ್. ಜಿ ಉಷಾರವರು ಪ್ರಕಟಣೆ ನೀಡಿದರು. India – explained as Independent Nation Declared in August – ಈ ಬಗ್ಗೆ ವಿವರ ನೀಡಿ, "ಮೇರಾ ಭಾರತ್ ಮಹಾನ್" ವೀಡಿಯೋ ಸ್ಪರ್ಧೆಗಳಲ್ಲಿ ಭಾಗವಹಿಸಿದ ರೊ. ಸಿ. ವಿಜಯಕುಮಾರ್, ರೊ. ಗಾಯತ್ರಿ ಸುಮತೀಂದ್ರ ಮತ್ತು ರೊ.ಶೋಭಾ ರುದ್ರೇಶ್‌ರವರನ್ನು ನೆನಪಿನ ಕಾಣಿಕೆ ನೀಡಿ ಅಭಿನಂದಿಸಿದರು.

ಜಿಲ್ಲಾ ಮಟ್ಟ ಹಾಗೂ ವಲಯ ಮಟ್ಟದಲ್ಲಿರುವ ಸಮಿತಿಯಲ್ಲಿ ಅಧಿಕಾರದಲ್ಲಿರುವ ನಮ್ಮ ಈ ಕೆಳಕಂಡ ರೋಟರಿ ಸದಸ್ಯರನ್ನು ವೇದಿಕೆಗೆ ಆಹ್ವಾನಿಸಿ, ನೆನಪಿನ ಕಾಣಿಕೆ ನೀಡುವುದರ ಮೂಲಕ ಅಭಿನಂದನೆ ಸಲ್ಲಿಸಲಾಯಿತು. ರೊ.ಪಿಡಿಜಿ. ಡಾ. ಪಿ.ನಾರಾಯಣ, ರೊ. ಎನ್.ಎಸ್. ಶ್ರೀಧರ್, ರೊ.ಎಸ್. ದತ್ತಾತ್ರಿ, ರೊ. ಸುನೀತಾ ಶ್ರೀಧರ್, ರೊ.ವೀರಣ್ಣ ಎ. ಹುಗ್ಗಿ, ರೊ.ಎನ್.ವಿ. ಭಟ್ ರೊ. ವೈ.ಗೋಪಾಲಕೃಷ್ಣ ಗುಪ್ತ ಮತ್ತು ರೊ. ಎಂ. ಮಾಧವಾಚಾರ್‌ರವರುಗಳು ರೋಟರಿ ಜಿಲ್ಲಾ ಮತ್ತು ವಲಯ ಮಟ್ಟದ ವಿವಿಧ ಹುದ್ದೆಯಲ್ಲಿದ್ದಾರೆ.




ಮೇರಾ ಭಾರತ್ ಮಹಾನ್‌ಕಾರ್ಯಕ್ರಮದಂತೆ ಈ ನಮ್ಮ ಕೆಳಕಂಡ ಸದಸ್ಯರುದೇಶ ಭಕ್ತಿ ಗೀತೆಗಳನ್ನು ಹಾಡಿದರು.

ರೊ. ಗಾಯತ್ರಿ ಸುಮತೀಂದ್ರರವರು – ಭಾರತೀಯರು ನಾವು ಎಂದೆಂದೂ ಒಂದೇ ಭಾವೈಕ್ಯತೆಯಲಿ ಕೂಡಿ ನಡೆಯುವೆವು ಮುಂದೆ.

ರೊ. ಕಿಶೋರ್ ಶೀರನಾಳಿ – ಹಿಂದೂ ಸ್ಥಾನವು ಎಂದೂ ಮರೆಯದ ಭಾರತರತ್ನವು ಜನ್ಮಿಸಲಿ.

ಶ್ರೀಮತಿ ಶ್ರೀರಂಜಿನಿ ದತ್ತಾತ್ರಿ–ಎದ್ದು ನಿಲ್ಲು ವೀರಾದೇಶ ಕರೆದಿದೆ, ಪಡೆಯಕಟ್ಟು ವೀರ ಸಮರ ಸಾರಿದೆ.

ರೊ. ಎಂ.ಎನ್. ಎಸ್. ಮಣಿಯವರು– ನಿತ್ಯೋತ್ಸವದ ಜೋಗದ ಸಿರಿ ಬೆಳಕಿನಲ್ಲಿ ತುಂಗೆಯ ತೆನೆ ಬಳುಕಿನಲಿ ಮತ್ತು ವಿಶ್ವವಿನೂತನ ವಿದ್ಯಾಚೇತನ ಇದಕ್ಕೆ ರೊ.ಎನ್.ವಿ.ಭಟ್‌ರವರು ಸಾತ್ ನೀಡಿದರು.

**ನೂತನ ಸದಸ್ಯರ ಸೇರ್ಪಡೆ:** ಈ ಕೆಳಕಂಡಂತೆ ನಮ್ಮ ರೋಟರಿಗೆ ನೂತನ ಸದಸ್ಯರನ್ನು ಸೇರ್ಪಡೆಗೊಳಿಸಲಾಯಿತು.

1. ಕೃಷ್ಣಮೂರ್ತಿ – ದುರ್ಗಾಂಬ ಟ್ರಾವೆಲ್ಸ್
2. ಎನ್. ಚಂದ್ರಪ್ಪ – ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ – ಶಿಶು ಅಭಿವೃದ್ಧಿ ನಿವೃತ್ತ ಅಧಿಕಾರಿ.

ಇವರುಗಳನ್ನು ರೊ.ಪಿಡಿಜಿ. ಡಾ.ಪಿ.ನಾರಾಯಣರವರು ಪಿನ್ ಹಾಕಿ – ರೋಟರಿ ಸಾಹಿತ್ಯವನ್ನು ನೀಡಿ ನಮ್ಮ ರೋಟರಿಗೆ ಬರಮಾಡಿಕೊಂಡರು.

2ನೇ ಪುಟಕ್ಕೆ

## ಈ ವಾರದ ಸಭೆ

**ದಿನಾಂಕ : 04–09–2024 ಬುಧವಾರ** **ಸಂಜೆ 6:45**

**ಮುಖ್ಯ ಅತಿಥಿ: ಡಾ. ಚಿದಾನಂದ ಎನ್.ಕೆ.**
**ಪ್ರಿನ್ಸಿಪಾಲ್, ನ್ಯಾಷನಲ್ ಬಿಎಡ್ ಕಾಲೇಜ್, ಶಿವಮೊಗ್ಗ**
**ವಿಷಯ: ಸಮರ್ಥ ಶಿಕ್ಷಕ – ರಾಷ್ಟ್ರ ರಕ್ಷಕ**

**ದಯವಿಟ್ಟು ರೋಟರಿ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ**

ಸ್ಥಳ: **ರೋಟರಿ ಯುವ ಕೇಂದ್ರ,** ಸವಳಂಗ ರಸ್ತೆ, ಶಿವಮೊಗ್ಗ









ಇದೇ ಸಂದರ್ಭದಲ್ಲಿ ಮಾತನಾಡಿದ ರೊ.ಪಿಡಿಜಿ ಡಾ.ಪಿ. ನಾರಾಯಣರವರು ಇಂದು ಬಹಳ ಮಹತ್ತರವಾದ ದಿನ. ಇಂದು ಇಬ್ಬರನ್ನು ನೂತನ ಸದಸ್ಯರನ್ನಾಗಿ ರೋಟರಿಗೆ ಸೇರ್ಪಡೆ ಮಾಡಿಕೊಳ್ಳಲಾಗಿದೆ. 66 ವರ್ಷಗಳ ಇತಿಹಾಸವಿರುವ ಈ ರೋಟರಿಕ್ಲಬ್, ನಿರಂತರವಾಗಿ ಜನಸೇವೆ ಮಾಡಿದೆ. ಇಲ್ಲಿನ ಜನಸೇವೆಗೆ ತೊಡಗಿಕೊಳ್ಳಲು ನಿಮಗೆ ಅವಕಾಶ ನೀಡಲಾಗುತ್ತಿದೆ. ಸೇವೆಗೆ ನೀವು ತಯಾರಿದ್ದೀರಿ ಎಂಬ ವಿಶ್ವಾಸ ನಮಗಿದೆ. ರೋಟರಿಯಿಂದ ನಿಮ್ಮ ಜೀವನ ಸಾರ್ಥಕವಾಗಲಿ ಎಂದರು.

ಖಜಾಂಚಿ ರೊ.ಎಸ್.ಜಿ.ಗೋಪಾಲ್‌ರವರು ಮಾತನಾಡಿ ಜುಲೈ ತಿಂಗಳೊಳಗಾಗಿ ಸದಸ್ಯತ್ವ ಶುಲ್ಕ ನೀಡಿದವರಿಗೆ ಈ ಮೊದಲೇ ವಾಗ್ದಾನಿಸಿದಂತೆ ಬಹುಮಾನ ನೀಡಲು ಉದ್ದೇಶಿಸಿದ್ದು, ಈಗಾಗಲೇ ಬಹುಮಾನ ಪಡೆದವರನ್ನು ಬಿಟ್ಟು ಉಳಿದವರನ್ನು ವೇದಿಕೆಗೆ ಆಹ್ವಾನಿಸಿ ಬಹುಮಾನ ಕೊಡಿಸಿದರು.



**ವಿಶೇಷ ಆಕರ್ಷಣೆ:** ತಮ್ಮ ಚುರುಕು ನೃತ್ಯ ಹಾಗೂ ಅಭಿನಯದಿಂದ ರೋಟರಿ ವಲಯದಲ್ಲಿ ಹೆಸರು ಮಾಡಿರುವ ನಮ್ಮ ಕ್ಲಬ್‌ನ ಸದಸ್ಯರಾದ ರೊ.ಡಾ. ಮೈಥಿಲಿಯವರು ಹಿಂದಿಯ ಒಂದು ದೇಶ ಭಕ್ತಿಗೀತೆಗೆ ಹೆಜ್ಜೆ ಹಾಗಿ ನೃತ್ಯ ಮಾಡಿದ್ದು ಸರ್ವರನ್ನು ಮನರಂಜಿಸಿದ್ದಲ್ಲದೇ ಆಗಮಿಸಿದ್ದ ಎಲ್ಲಾ ರೋಟರಿ ಸದಸ್ಯರುಗಳ ಮನಸೂರೆಗೊಂಡರು.

ಮೇರಾ ಭಾರತ್ ಮಹಾನ್ ಕಾರ್ಯಕ್ರಮದ ಅಂಗವಾಗಿ ಈ ಕೆಳಕಂಡ ನಮ್ಮ ಸದಸ್ಯರು ಮತ್ತು ಅವರ ಮಕ್ಕಳು ಛದ್ಮವೇಷವನ್ನು ಹಾಕಿ ವೇದಿಕೆಗೆ ಆಗಮಿಸಿ ರೋಟರಿ ಸದಸ್ಯರ ಮೆಚ್ಚುಗೆಗೆ ಪಾತ್ರರಾದರು.

ಕಾರ್ಯದರ್ಶಿ ರೊ.ಎನ್.ಜಿ. ಉಷಾ – ಓ ನನ್ನ ದೇಶ ಭಾಂದವರೇ ಎಂಬ ಹಾಡಿಗೆ ಮತ್ತು ವೀಡಿಯೋ ಪ್ರಾತ್ಯಕ್ಷಿಕೆಗೆ ತಮ್ಮ ಅಭಿನಯವನ್ನು ಮಾಡಿದರು.

ರೊ. ಶೋಭಾ ರುದ್ರೇಶ್‌ರವರು–ಕಿತ್ತೂರು ರಾಣಿ ಚೆನ್ನಮ್ಮನವರ ಪಾತ್ರ, ರೊ. ಸಂಕಲ್ಪ – ರೊ.ಡಾ.ಮೈಥಿಲಿಯವರ ಪುತ್ರ – ಸ್ವಾಮಿವಿವೇಕಾನಂದ, ರತನ್‌ಗೌಡ ಸುಭಾಷ್‌ಚಂದ್ರ ಮತ್ತು ಇಶಾಗೌಡ ಕಿತ್ತೂರು ಚೆನ್ನಮ್ಮ ವೇಷ ಧರಿಸಿ ಕಾರ್ಯಕ್ರಮಕ್ಕೆ ಮೆರುಗು ತಂದರು.

ವಿವಾಹ ವಾರ್ಷಿಕೋತ್ಸವಕಾರ್ಯಕ್ರಮದಲ್ಲಿ ರೊ. ಕೆ. ಸೂರ್ಯನಾರಾಯಣ ಉಡುಪ ಹಾಗೂ ರೊ.ಎನ್.ಜಿ. ಉಷಾರವರು – ಬಾಳ ಬಂಗಾರ ನೀನು ಹಣೆಯ ಸಿಂಗಾರ ನೀನು ಎಂಬ ಚಲನ ಚಿತ್ರಗೀತೆಗೆ ಹೆಜ್ಜೆ ಹಾಕಿದರು ಮತ್ತು ಪರಸ್ಪರ ಮಾಲೆ ಬದಲಾಯಿಸಿಕೊಂಡರು. ಕೊನೆಯಲ್ಲಿ ರೊ.ಗಾಯತ್ರಿ ಸುಮತೀಂದ್ರರವರು ಸರ್ವರನ್ನು ವಂದಿಸಿದರು. ರಾಷ್ಟ್ರಗೀತೆಯ ನಂತರ ಸಭೆ ಸಂಪನ್ನಗೊಂಡಿತು. ರುಚಿಯಾದ ಭೋಜನ ಸರ್ವರಿಗೂ ಸಿದ್ಧವಾಗಿತ್ತು.




**ಮೇರಾ ಭಾರತ್ ಮಹಾನ್ ವಿಷಯದ ಬಗ್ಗೆ ವೀಡಿಯೋ ಭಾಷಣದ ಸ್ಪರ್ಧೆಯಲ್ಲಿ ಬಹುಮಾನ ಗಳಿಸಿದ ರೊ. ವಿಜಯ್ ಕುಮಾರ್, ರೊ. ಗಾಯತ್ರಿ ಸುಮತೀಂದ್ರ, ರೊ. ಶೋಭಾ ರುದ್ರೇಶ್.**





**ಕೌಟುಂಬಿಕ ಸ್ನೇಹ ಮಿಲನ ಸಮಾರಂಭದಲ್ಲಿ ನೂತನ ಸದಸ್ಯರಾಗಿ ಎಸ್. ಕೃಷ್ಣಮೂರ್ತಿ ಮತ್ತು ಎನ್. ಚಂದ್ರಪ್ಪ ನಮ್ಮ ಕ್ಲಬ್‌ಗೆ ಸೇರ್ಪಡೆಗೊಂಡರು.**




**ಎನ್ ಇಎಸ್ ಪ್ರೌಢಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ರೊ. ಎನ್.ವಿ. ಭಟ್‌ರವರು ಸಂಚಾರ ಸುರಕ್ಷತೆಯ ಬಗ್ಗೆ ಉಪನ್ಯಾಸ ನೀಡಿದರು.**



ಆರ್‌ಎಂಬಿ ರೋಟರಿ ಬಿಜಿನೆಸ್ ಮೀಟಿಂಗ್‌ನಲ್ಲಿ ನಮ್ಮ ಕ್ಲಬ್ ರೊ. ಕಿಶೋರ್ ಶೀನ್ಞಾಳಿಯುವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು.










ರೋಟರಿ ಕ್ಲಬ್ ಹಾಗೂ ವಿಕಾಸ ಟ್ರಸ್ಟ್ ಬಾಲಗೋಕುಲ ಸೇವಾ ವಿಭಾಗದ ಸಂಯುಕ್ತ ಆಶ್ರಯದಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕ ಶಿಕ್ಷಕಿಯರಿಗೆ ಟ್ರೈನಿಂಗ್ ಪ್ರೋಗ್ರಾಮ್ ಏರ್ಪಡಿಸಲಾಗಿತ್ತು.

ಶಿವಮೊಗ್ಗ ಜಿಲ್ಲೆಯ ಕ್ಷೇತ್ರ ಶಿಕ್ಷಣಾಧಿಕಾರಿ ಬಿಇಒ ಶ್ರೀ ರಮೇಶ್‌ನಾಯಕ್‌ರವರು ಉದ್ಘಾಟಿಸಿದರು. ಆಟದಿಂದ ಪಾಠ ಬೌದ್ಧಿಕ ವಿಕಾಸದ ಬಗ್ಗೆ ಪಾಂಡುರಂಗ ಪರಾಂಡೆಯವರು ಮತ್ತು ಪ್ರೇಮಾ ಟೀಚರ್‌ರವರು ತರಬೇತಿ ನೀಡಿದರು.



ರೋಟರಿ ಸೆಂಟ್ರಲ್ ಕ್ಲಬ್ ಸಭೆಯಲ್ಲಿ ನಮ್ಮ ಕ್ಲಬ್ ರೊ. ವೀರಣ್ಣ ಎ. ಹುಗ್ಗಿಯವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಸದಸ್ಯತ್ವ ಅಭಿಯಾನದ ಬಗ್ಗೆ ಮಾತನಾಡಿದರು.

## ಇಂಟರ್‍ಯಾಕ್ಟ್ ಕ್ಲಬ್‌ಗಳ ಪದವಿ ಸ್ವೀಕಾರ ಸಮಾರಂಭ




ತುಂಗಾ ಹೈಸ್ಕೂಲ್, ಬಾಪೂಜಿ ನಗರ









ರಾಷ್ಟ್ರೀಯ ಪ್ರೌಢಶಾಲೆ, ಬಿ.ಆರ್. ಪ್ರಾಜೆಕ್ಟ್



## ಸಂಪಾದಕೀಯ

### ಯಾವ ವಿದ್ಯೆಯೂ ವ್ಯರ್ಥವಲ್ಲ

ಅವನೊಬ್ಬ ಉತ್ಸಾಹಿ ತರುಣ. ಆಗ ತಾನೆ ಮೇಷ್ಟ್ರಾಗಿ ಕೆಲಸಕ್ಕೆ ಸೇರಿದ್ದ. ಮಕ್ಕಳಿಗೆ ಪಠ್ಯಪುಸ್ತಕದ ಜೊತೆಗೆ ಏನಾದರೂ ಕಲಿಸಬೇಕೆನ್ನುವ ಆಸೆ. ಜೊತೆಯಲ್ಲಿರುವವರಿಗೆ 'ನಮ್ಮ ಕೆಲಸವನ್ನು ನಾವು ಮಾಡಿದರೆ ಸಾಕು, ಬೇರೆಲ್ಲ ನಮಗೆ ಏಕೆ ಬೇಕು' ಎನ್ನುವ ಭಾವ. ಹಾಗಾಗಿ ಎಲ್ಲರೂ 'ಇಲ್ದಿರೋದನ್ನೆಲ್ಲಾ ಯಾಕಪ್ಪ ಹೇಳೋದು ಸಂಬಳ ತೆಗೆದುಕೊಳ್ಳುವುದಕ್ಕೆ ಏನು ಬೇಕೋ ಅದನ್ನ ಮಾಡೋಣ' ಎನ್ನುತ್ತಿದ್ದರು.

ಎಲ್ಲದರ ಮಧ್ಯೆಯೂ ಆ ಯುವ ಮೇಷ್ಟ್ರು ಹುಡುಗರಲ್ಲಿ ಹುದುಗಿರುವ ಪ್ರತಿಭೆಯನ್ನು ಹೊರಕ್ಕೆ ತೆಗೆದು ಅವರಿಗೆ ಏನು ಬೇಕೋ ಅದನ್ನು ಹೇಳಿಕೊಡುವ ಪ್ರಯತ್ನವನ್ನು ಮಾಡುತ್ತಿದ್ದ. ನಿಧಾನವಾಗಿ ಆತ ಹುಡುಗರಿಗೆ ಪ್ರಿಯವಾಗತೊಡಗಿದ. ಪುಸ್ತಕದ ಎಷ್ಟೋ ಬೋರ್ ಹೊಡೆಯುವ ಸಂಗತಿಗಳಿಗಿಂತ ತಮ್ಮೊಳಗಿನ ಉತ್ಸಾಹಕ್ಕೆ ನೀರೆರೆಯುವ ಮೇಷ್ಟ್ರು ಅವರಿಗೆ ಹಿತವಾಗತೊಡಗಿದ್ದ. ಯುವ ಮೇಷ್ಟ್ರು ಮಾತ್ರ ಕಾಡನ್ನು ತೋರಿಸಿ, ಹಕ್ಕಿ ಪಕ್ಷಿಗಳನ್ನು ತೋರಿಸಿ, ಗಿಡಮರಗಳನ್ನು ತೋರಿಸಿ, ಇವನ್ನೆಲ್ಲಾ ಹೊಸದಾಗಿ ಹೇಗೆ ನೋಡಬೇಕು ಎಂದೆಲ್ಲಾ ಹೇಳಿಕೊಡುತ್ತಿದ್ದ. ಹೀಗೇ ಆದರೆ ನಮ್ಮ ಅಸ್ತಿತ್ವವೇ ಇಲ್ಲವಾಗುತ್ತದೆ ಎಂದು ಬೇರೆ ಶಿಕ್ಷಕರು ಪಾಠವನ್ನು ಬಿಟು ಮಕ್ಕಳಿಗೆ ಇಲ್ಲದ್ದನ್ನು ಹೇಳಿಕೊಡುತ್ತಾನೆ ಎಂದು ಹೆಡ್ ಮೇಷ್ಟ್ರಿಗೆ ದೂರನ್ನು ಕೊಟ್ಟರು.

ಮುಖ್ಯೋಪಾಧ್ಯಾಯ ಆ ಯುವ ಮೇಷ್ಟ್ರನ್ನು ಕರೆದು ಕೇಳಿಯೇ ಬಿಟ್ಟರು. ಅದಕ್ಕೆ ಅತ, 'ಸರ್ ದ್ರೋಣಾಚಾರ್ಯರು ಅರ್ಜುನನಿಗೆ ಬಿಲ್ಲು ವಿದ್ಯೆ ಹೇಳಿಕೊಡುವಾಗ ಅನೇಕ ಅಸ್ತ್ರಗಳ ಬಗ್ಗೆ ಹೇಳುತ್ತಾರೆ. ಆಗ ಅರ್ಜುನ, 'ಗುರುಗಳೇ ಇಷ್ಟೊಂದು ಅಸ್ತ್ರಗಳನ್ನು ಹೇಗೆ ಉಪಯೋಗಿಸಬೇಕು ಅನ್ನುವುದನ್ನು ಹೇಳುತ್ತಿದ್ದೀರಿ. ಇದರಿಂದ ಏನು ಪ್ರಯೋಜನ? ಸುಮ್ಮನೆ ಬತ್ತಳಿಕೆಯಲ್ಲಿರುತ್ತವೆ ಅಷ್ಟೇ. ಜೀವನದಲ್ಲಿ ಅದನ್ನು ಒಮ್ಮೆಯಾದರೂ ಬಳಸುತ್ತೇವೋ ಇಲ್ಲವೋ' ಎನ್ನುತ್ತಾನೆ. ಆಗ ದ್ರೋಣರು, 'ಅರ್ಜುನ, ಕಲಿಯುವಾಗ ಎಲ್ಲವನ್ನು ಕಲಿತುಕೋ, ಕಲಿಯುವುದರಲ್ಲಿ ತಪ್ಪೇನಿದೆ? ಅದರ ಉಪಯೋಗವನ್ನು ಕಾಲ ನಿರ್ಧರಿಸುತ್ತದೆ' ಎನ್ನುತ್ತಾರೆ.

ಈ ಮಾತನ್ನು ಅರ್ಜುನ ಮರೆತೂ ಬಿಡುತ್ತಾನೆ. ಕುರುಕ್ಷೇತ್ರ ರಣರಂಗದಲ್ಲಿ ಎಲ್ಲ ಬಾಣಗಳು ಬತ್ತಳಿಕೆಯಲ್ಲಿ ಖಾಲಿಯಾಗುತ್ತಾ ಬರುತ್ತವೆ. ಸಾಮಾನ್ಯ ಸೈನಿಕನೊಬ್ಬ ಅವನ ಮೇಲೆ ಎರಗಿ ಬಂದಾಗ ಬತ್ತಳಿಕೆಯಲ್ಲಿ ಸಾಮಾನ್ಯ ಎಂದುಕೊಂಡಿದ್ದ, ಅರ್ಜುನ ಮರೆತೇ ಹೋಗಿದ್ದ ಅಸ್ತ್ರ ಸಿಗುತ್ತದೆ. ಅದರಿಂದ ಅವನು ಆ ಸೈನಿಕನನ್ನು ಕೊಲ್ಲುತ್ತಾನೆ. ಆಗ ಅವನಿಗೆ ದ್ರೋಣರು ಹೇಳಿದ ಮಾತು ನೆನಪಾಗುತ್ತದೆ– 'ಜಗತ್ತಿನಲ್ಲಿ ಯಾವುದು ವ್ಯರ್ಥ್ಯವಲ್ಲ' ಎಂದು. ಈಗ ಹೇಳಿ 'ನಾನು ನನ್ನ ವಿದ್ಯಾರ್ಥಿಗಳಿಗೆ ಹೇಳಿಕೊಡುತ್ತಿರುವ ಈ ಸಂಗತಿಗಳು ಹೇಗೆ ವ್ಯರ್ಥವಾಗುತ್ತವೆ? ಈಗ ನಮಗೆ ಇವರು ಮಕ್ಕಳು, ಭವಿಷ್ಯದಲ್ಲಿ ಏನೋ ಆಗಬಲ್ಲ ಚೇತನಗಳು. ನಾವು ಕಲಿಸಿದ್ದು ಈ ಪ್ರಯೋಜನಕ್ಕೆ ಬರದೇ ಹೋಗಬಹುದು. ಕಾಲ ಬಂದಾಗ ಅವು ಅವರಿಗೆ ಸಣ್ಣ ಆಸರೆ ಕೊಟ್ಟರೂ ನಮ್ಮ ಪ್ರಯತ್ನ ಸಾರ್ಥಕವಾಗುತ್ತವೆ ಅಲ್ಲವೆ?' ಎನ್ನುತ್ತಾನೆ.


ತಮ್ಮ ವೃತ್ತಿ ಜೀವನದ ಬಹುದೊಡ್ಡ ಪಾಠವನ್ನು ಕಲಿತಂತಾಗಿ ಮುಖ್ಯೋಪಾಧ್ಯಾಯರು ಆ ಯುವಮೇಷ್ಟ್ರನ್ನು ಅಪ್ಪಿಕೊಳ್ಳುತ್ತಾರೆ.

• ರೊ. ಎಂ. ಮಾಧವಾಚಾರ್

### ಚಿಂತನ

ಜೀವನದಲ್ಲಿ ಸುಖ, ಸಂತೋಷ ಯಾಂತ್ರಿಕತೆಯ ನಡುವೆ ಸಮಸ್ಯೆಗಳೂ ಇರುತ್ತವೆ. ಸಮಸ್ಯೆಗೆ ಪರಿಹಾರವೂ ಇದ್ದೇ ಇರುತ್ತದೆ. ಆದರೆ ಇದೆಲ್ಲಕ್ಕಿಂತ ಮುಖ್ಯವಾಗಿ ನಾವು ಸಂಭ್ರಮಿಸುವ ಸಂತಸದ ಕ್ಷಣಗಳೂ, ಸಂದರ್ಭಗಳೂ ಇರುತ್ತವೆ. ಅಂತಹ ಅವಕಾಶ ಕೆಲವು ಸಮಾರಂಭಗಳಲ್ಲಿ ಇರುತ್ತದೆ. ಇಂತಹ ಸುಂದರ ಕ್ಷಣಗಳಿಂದ ನಾವು ದೂರವಿರಬಾರದು. ಆಗಲೇ ಬದುಕು ಸುಂದರ ಪಯಣ.

– ರೊ. ಎನ್.ಜಿ. ಉಷಾ




**ನಾವು ಯೋಚಿಸುವ, ಹೇಳುವ ಅಥವಾ ಮಾಡುವ ಸಂಗತಿಗಳ ಚತುರ್ವಿಧ ಪರೀಕ್ಷೆ**

1. ಇದು **ಸತ್ಯವೇ?**
2. ಇದು ಸಂಬಂಧಪಟ್ಟ ಎಲ್ಲರಿಗೂ **ಸನ್ಯಾಯಸಮ್ಮತವೇ?**
3. ಇದು **ಸೌಹಾರ್ದತೆ** ಮತ್ತು **ಉತ್ತಮ ಸ್ನೇಹವನ್ನು** ನಿರ್ಮಿಸುತ್ತದೆಯೇ ?
4. ಇದು ಸಂಬಂಧಪಟ್ಟ ಎಲ್ಲರಿಗೂ **ಅನುಕೂಲಕರವೇ?**

*Happy Birthday Wishes*







Dasharath K C
01st Sep



Rekha Patil T.S.
01st Sept

## ROTARY INFORMATION

**Our members in Rotary District Committee:**

**Rtn. PDG.Dr.P.Narayana** - Chairman, District Rotary Foundation Committee(DRFC)

**Rtn. PAG. N.S.Sridhar** - Chairman Vocation Training and Skill Development

**Rtn. PAG. S. Dattatri** - Chairman, School Adoption

**Rtn. PAG Suneetha Sridhar** –Vice Chairman, Care for the Aged

**Rtn. Veeranna A. Huggi** - Membership Development

**Our Members as Zonal Coordinators**

**Rtn. Nagapathi V.Bhat** – Dist. Project – Awareness RasthaSanchara Safety

**Rtn. Y.Gopalakrishna Gupth** - RYLA

**Rtn. M Madhavachar** - Community Economic Development

To,

*Book Post*